

ಇಟ್ಟುಕೋ, ಆಮೇಲೆ ಹೇಳ್ತೇನೆ' ಎಂದರು. 'ಇವರು ನಮ್ಮ ಪ್ರೆಸ್ ಮ್ಯಾನೇಜರ್' ಎಂದು ನನಗೆ ಹೇಳಿ, 'ನಾಳೆ ಸಂಜೆ ಇದೇ ಹೊತ್ತಿಗೆ ಬರ್ರಿ' ಎಂದರು. ನನ್ನ ಕವಿತೆಗಳು ಮುದ್ರಣವಾಗಿಯೇ ಬಿಟ್ಟವು ಎಂದು ಕನಸು ಕಾಣುತ್ತ, ಅವರಿಗೆ ನಮಸ್ಕರಿಸಿ ಹೊರಬಂದೆ.

ಮರುದಿನ ಈ ಸಂಗತಿ ಹುಯಿಲಗೋಳ ಸರ್‌ಗೆ ಹೇಳಿದೆ. ತಕ್ಷಣ ಅವರು, 'ಇವತ್ತು ವೆಂಕಮ್ಮ ಸಿಕ್ಕಿದ್ದರು, ನೀನು ಚೆಂದ ಬರೆದೀ ಅಂತ ಅಂದರು' ಎಂದು ಹೇಳಿದರು. ನನಗೆ ಮತ್ತೊಂದು ಗರಿ ಮೂಡಿತು. ಅಂದು ಸಂಜೆ ವನಿತಾ ಸಮಾಜಕ್ಕೆ ಹೋದೆ. ವೆಂಕಮ್ಮ ಅವರ ಮುಗುಳುನಗು ನನ್ನ ಆತಂಕ ಕಡಿಮೆಗೊಳಿಸಿತು. 'ನಿಮ್ಮ ಕವನ ಓದಿದ್ದೇನೆ, ಆಯ್ದು ಪ್ರಕಟಿಸ್ತೇವೆ' ಎಂದು ಹೇಳಿ, 'ನೀವು ಬರೆಯುವುದರ ಜೊತೆಗೆ, ಹೆಚ್ಚು ಓದಬೇಕು; ಬೇಂದ್ರೆ ಅವರ ಕವಿತಾ, ನಿರಂಜನ, ಕಟ್ಟೀಮನಿ, ಅ.ನ. ಕೃಷ್ಣರಾಯರ ಕತೆ, ಕಾದಂಬರಿ ಓದಿರಿ' ಎಂದರು. ನಿರಂಜನ ಅವರ ಹೆಸರು ವೆಂಕಮ್ಮ